UASB LIBRARY
Newspaper Clippings



Pg .1 Tuesday 06-04-2021 Jai Kisan



ರಸಗೊಬ್ಬರ ಖರೀದಿದಾರರಿಗೆ ಸಬ್ಸಿಡಿಯನ್ನು ನೇರ ನಗದು ಮೂಲಕ ಪಾವತಿಸುವ ಬಹುನಿರೀಕ್ಷಿತ 'ಡಿಬಿಟಿ ಇನ್ ಫರ್ಟಿಲೈಸರ್' ಯೋಜನೆ ಜಾರಿ ಮಾಡಲು ಸಾಧ್ಯವಾಗದೆ ಕೇಂದ್ರ ಸರಕಾರ ತಿಣುಕಾಡುತ್ತಿದೆ. ಜಾರಿಗೆ ಬಂದರೆ ಇದರ ಪ್ರಯೋಜನ, ಇದರಲ್ಲಿರುವ ಲೋಪದೋಷ, ಸಾಧಕಬಾಧಕಗಳ ಬಗ್ಗೆ ಒಂದು ಸಮಗ್ರ ನೋಟ ಇಲ್ಲಿದೆ.

ನೇರ ನಗದು ಬೇಗ ಸಿಗದು

ಯೋಜನೆ ಜಾರಿಗೆ ತೊಡಕುಗಳೇನು?

■ ಡಿ.ಕೆ.ಕಿರಣ್‌ಕುಮಾರ್
kiran.dk@timesgroup.com

ಏನಿದು ಯೋಜನೆ?

ದಶಕದ ಹಿಂದೆ ಘೋಷಣೆಯಾದ 'ಡಿಬಿಟಿ ಇನ್ ಫರ್ಟಿಲೈಸರ್' (ರಸಗೊಬ್ಬರ ಸಬ್ಸಿಡಿ ನೇರ ನಗದು ಪಾವತಿ) ಯೋಜನೆ ಇನ್ನೂ ವ್ಯಾಯೋಗಿಕ ಹಂತದಲ್ಲೇ ಇದ್ದು ಹಲವು ಲೋಪಗಳಿಂದ ಕೂಡಿದೆ. ಪ್ರಸಕ್ತ ವರ್ಷ ಕೃಷಿ ಕಾಯಿದೆಗಳ ಜಾರಿ ಸಂಬಂಧಿಸಿ ರೈತರಿಂದ ಪ್ರತಿರೋಧ ವ್ಯಕ್ತವಾಗುತ್ತಿರುವುದರಿಂದ 2021-22ನೇ ಆರ್ಥಿಕ ವರ್ಷದಲ್ಲಿ ಜಾರಿಗೆ ಮುಂದಾದರೆ ರೈತರ ಮತ್ತಷ್ಟು ಆಕ್ರೋಶವನ್ನು ಎದುರಿಸಬೇಕಾಗಬಹುದೆಂಬ ಆತಂಕ ಈ ಯೋಜನೆ ಜಾರಿಯನ್ನು ಇನ್ನಷ್ಟು ವಿಳಂಬಿಸಿದೆ. ರೈತರಿಗೆ ಕಡಿಮೆ ದರದಲ್ಲಿ ಯೂರಿಯಾ, ಎನ್‌ಪಿಕೆ ಮತ್ತಿತರ ರಸಗೊಬ್ಬರಗಳು ದೊರೆಯಬೇಕೆಂಬ ಕಾರಣಕ್ಕೆ ಸದ್ಯ ರಸಗೊಬ್ಬರ ಉತ್ಪಾದಕ ಕಂಪನಿಗಳಿಗೇ ನೇರವಾಗಿ ಸಬ್ಸಿಡಿ ಮೊತ್ತವನ್ನು ಸರಕಾರ ಪಾವತಿಸುತ್ತಿದೆ. ರಸಗೊಬ್ಬರ ಸಂಸ್ಥೆಗಳು ಹೆಚ್ಚಿನ ಉತ್ಪಾದನೆ ತೋರಿಸಿ ಅಡ್ಡ ಮಾರ್ಗಗಳ ಮೂಲಕ ಹೆಚ್ಚಿನ ಸಬ್ಸಿಡಿ ಮೊತ್ತವನ್ನು ಪಡೆದುಕೊಳ್ಳುತ್ತಿವೆ ಎಂಬ ಆರೋಪವಿತ್ತು. ಇನ್ನೊಂದೆಡೆ, ರೈತರು ಬೇಕಾಬಿಟ್ಟಿಯಾಗಿ ಭೂಮಿಗೆ ರಸಗೊಬ್ಬರ ಸುರಿಯುವುದರಿಂದ ಮಣ್ಣಿನ ಗುಣಮಟ್ಟ ಹಾಳಾಗುತ್ತಿದೆ ಎಂಬ ಆಂಶವನ್ನು ಪರಿಗಣಿಸಿದ ಸರಕಾರ ರಸಗೊಬ್ಬರ ವಿತರಣೆ ವಿಧಾನದಲ್ಲಿ ಬದಲಾವಣೆ ತಂದಿದ್ದು, ಪಾಯಿಂಟ್ ಆಫ್ ಸೇಲ್ (ಪಿಒಎಸ್) ಯಂತ್ರದಲ್ಲಿ ರೈತರ ಬಯೋಮೆಟ್ರಿಕ್ ಮಾಹಿತಿ ಸಂಗ್ರಹಿಸಿ ವಿತರಣೆ ಮಾಡುತ್ತಿದೆ. ಮುಂದುವರಿದು, ಉತ್ಪಾದಕ ಸಂಸ್ಥೆಗಳಿಗೆ ಬದಲಾಗಿ ರೈತರಿಗೇ ನೇರವಾಗಿ ಸಬ್ಸಿಡಿ ತಲುಪಿಸುವುದು ಸರಕಾರದ ಯೋಜನೆ.

ಯುಪಿಎ ಕಾಲದಲ್ಲೇ ಚಾಲನೆ

ದೇಶಾದ್ಯಂತ ರಸಗೊಬ್ಬರ ಮಾರಾಟದ ನಿಖರ ಮಾಹಿತಿಯನ್ನು ಸಂಗ್ರಹಿಸುವುದಾಗಿ 2012-13ರ ಬಜೆಟ್‌ನಲ್ಲಿ ಘೋಷಿಸಿದ ಅಂದಿನ ಯುಪಿಎ ಸರಕಾರ, 2013ರ ಏಪ್ರಿಲ್ ಒಂದರಿಂದ ಆಯ್ದ 10 ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಯೋಜನೆಯನ್ನು ಆರಂಭಿಸಿತು. ಬಳಿಕ ಇ-ಫರ್ಟಿಲೈಸರ್ ಮಾನಿಟರಿಂಗ್ ಸಿಸ್ಟಮ್ (ಇ-ಎಫ್ ಎಂಎಸ್) ರೂಪಿಸಿದ ರಸಗೊಬ್ಬರ ಇಲಾಖೆಯು ಆದರನ್ವಯ ದೇಶಾದ್ಯಂತ ರಸಗೊಬ್ಬರ ಮಾರಾಟ ಮಾಹಿತಿಯನ್ನು ಸಂಗ್ರಹಿಸುತ್ತಿದೆ. ಈ ಬಗ್ಗೆ 2015-16ರ ಆರ್ಥಿಕ ಸರ್ವೆಯಲ್ಲಿ ವಿವರಣೆ ನೀಡಿದ ಎನ್‌ಡಿಎ ಸರಕಾರ, ಶೇ. 24ರಷ್ಟು ಸಬ್ಸಿಡಿ ಮೊತ್ತ ಈ ಮೊದಲು ರಸಗೊಬ್ಬರ ಉತ್ಪಾದಕ ಸಂಸ್ಥೆಯು ಆಯಾ ಜಿಲ್ಲೆಯ ಪ್ರಮಾಣೀತ ಗೋಡೌನ್‌ಗೆ ರೈಲ್ವೆ ಮೂಲಕ ರಸಗೊಬ್ಬರ ದಾಸ್ತಾನು ಮಾಡಿದಾಕ್ಷಣ ಶೇ.95ರಷ್ಟು ಸಬ್ಸಿಡಿಯನ್ನು ಸರಕಾರ ಪಾವತಿಸುತ್ತಿತ್ತು. ಬಳಿಕ ಈ ಮಾಹಿತಿಯನ್ನು ರಾಜ್ಯ ಸರಕಾರ ದೃಢಪಡಿಸುತ್ತಿದ್ದಂತೆ ಇನ್ನುಳಿದ ಶೇ.5 ಸಬ್ಸಿಡಿ ಮೊತ್ತ ಉತ್ಪಾದಕ ಸಂಸ್ಥೆಗಳಿಗೆ ದೊರೆಯುತ್ತಿತ್ತು. ಇದೀಗ ಪಿಒಎಸ್ ಯಂತ್ರದಲ್ಲಿ ದಾಖಲಿಸಲಾದ ಮಾಹಿತಿ ಆಧಾರದಂತೆ ಕೇಂದ್ರ ಸರಕಾರದ ರಸಗೊಬ್ಬರ ಸಬ್ಸಿಡಿ ಪಾಲು 2019ರಲ್ಲಿ 70,605 ಕೋಟಿ ರೂ. ಹಾಗೂ 2020ರಲ್ಲಿ 79,998 ಕೋಟಿ ರೂ., 2020-21ರ ಬಜೆಟ್‌ನಲ್ಲಿ ಸಬ್ಸಿಡಿ ಮೊತ್ತವಾಗಿ 71,000 ಕೋಟಿ ರೂ.ಗಳನ್ನು ಮೀಸಲಿರಿಸಿದ್ದರೆ, ಉತ್ಪಾದಕ ಸಂಸ್ಥೆಗಳಿಗೆ ಸರಕಾರ ಉಳಿಸಿಕೊಂಡಿದ್ದ ಹಿಂದಿನ ಬಾಕಿ 65,000 ಕೋಟಿ ರೂ.ಗಳನ್ನು 2020ರ ನ.12ರಂದು 'ಮೂರನೇ ಪ್ಯಾಕೇಜ್'ನಲ್ಲಿ ವಿತ್ತ ಸಚಿವರು ಘೋಷಿಸಿದ್ದರು. ಪ್ರಸಕ್ತ ಬಜೆಟ್‌ನಲ್ಲಿ 1 ಲಕ್ಷ ಕೋಟಿ ರೂ. ಮೊತ್ತವನ್ನು ರಸಗೊಬ್ಬರ ಸಬ್ಸಿಡಿಗೆ ಒದಗಿಸಲಾಗುತ್ತದೆ.

ಲಕ್ಷಾಂತರ ಕೋಟಿ ರೂ. ಸಬ್ಸಿಡಿ

ಚಿಕ ಪೋಕಸ್

ಅಸಮರ್ಥ ಉತ್ಪಾದಕರನ್ನು ತಲಪುತ್ತಿದೆ, ಶೇ.41ರಷ್ಟು ರಸಗೊಬ್ಬರ ವಿದೇಶಗಳಿಗೆ ಕಳ್ಳಸಾಗಣೆಯಾಗುವ ಜತೆಗೆ ಕೃಷಿಯೇತರ ಉದ್ದೇಶಕ್ಕೆ ಬಳಕೆಯಾಗುತ್ತಿದೆ ಹಾಗೂ ಶೇ.24ರಷ್ಟು ರಸಗೊಬ್ಬರ ಸಾಕಷ್ಟು ಭೂಮಿ ಹೊಂದಿರುವ ಶ್ರೀಮಂತ ಕೃಷಿಕರಿಂದ ಬಳಕೆಯಾಗುತ್ತಿದೆ ಎಂದಿತು. ಕೇವಲ ಶೇ.11ರಷ್ಟು ಸಣ್ಣ ಕೃಷಿಕರಿಂದ ರಸಗೊಬ್ಬರ ಖರೀದಿಯಾಗುತ್ತಿದೆ ಎಂದು ಅಭಿಪ್ರಾಯಪಟ್ಟ ಸರಕಾರ, ಜನಧನ-ಆಧಾರ್-ಮೊಬೈಲ್ (ಜೆಎಎಂ) ಪ್ಲಾಟ್‌ಫಾರ್ಮ್‌ನಲ್ಲಿ ರಸಗೊಬ್ಬರ ಸಬ್ಸಿಡಿಯನ್ನು ರೈತರಿಗೆ ನೇರವಾಗಿ ಒದಗಿಸುವುದಾಗಿ ಘೋಷಿಸಿತು. ಅದನ್ನು ಕಾರ್ಯರೂಪಕ್ಕೆ ತರಲು ಮಾರಾಟಗಾರರಿಂದ ರೈತರು ಪಿಒಎಸ್ ಮಷಿನ್ ಮೂಲಕ ರಸಗೊಬ್ಬರ ಖರೀದಿಸಿದಾಗ ಮಾತ್ರ ಉತ್ಪಾದಕ ಸಂಸ್ಥೆಗೆ ಸಬ್ಸಿಡಿ ಪಾವತಿಯಾಗುವ ಯೋಜನೆಯನ್ನು ಪ್ರಾಯೋಗಿಕವಾಗಿ 12 ರಾಜ್ಯಗಳ 18 ಆಯ್ದ ಜಿಲ್ಲೆಗಳಿಂದ 2018ರ ಮಾರ್ಚ್‌ನಿಂದ ಚಾಲನೆ ನೀಡಿ, ಬಳಿಕ ದೇಶಾದ್ಯಂತ ವಿಸ್ತರಿಸಿತು.

ರಸಗೊಬ್ಬರ ಖರೀದಿದಾರರಿಗೆ ನೇರ ಸಬ್ಸಿಡಿ ಮತ್ತೂ ವಿಳಂಬ



ವ್ಯವಸ್ಥಿತವಾಗಿ ರಸಗೊಬ್ಬರ ಪೂರೈಸಲು ಸರಕಾರ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ಸಬ್ಸಿಡಿಯನ್ನು ರೈತರಿಗೆ ನೇರವಾಗಿ ಪೂರೈಸುವ ಗುರಿಯೊಂದಿಗೆ ಎಲ್ಲ ವಿಧಾನಗಳ ಕುರಿತು ಪರಾಮರ್ಶೆ ನಡೆಸಲಾಗುತ್ತಿದೆ. ಸದ್ಯಕ್ಕೆ ಸ್ಪಷ್ಟತೆ ಸಿಕ್ಕಿಲ್ಲದಿರುವುದರಿಂದ ಎಂದಿನಿಂದ ಜಾರಿಯಾಗುತ್ತದೆ ಎಂಬುದನ್ನು ಈಗಲೇ ಹೇಳಲಾಗದು.

-ಡಿ.ವಿ. ಸದಾನಂದ ಗೌಡ
ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ



ರಸಗೊಬ್ಬರ ಮಾರಾಟ ಸಂಬಂಧಿಸಿ ಕೇಂದ್ರ ಸರಕಾರ ನೀಡುವ ಎಲ್ಲ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆ. ರೈತರಿಗೆ ಸಬ್ಸಿಡಿಯನ್ನು ನೇರ ನಗದು ವರ್ಗಾವಣೆ ಮೂಲಕ ನೀಡುವ ಕುರಿತು ಇದುವರೆಗೂ ಸೂಚನೆ ಬಂದಿಲ್ಲ.

- ಬಿ.ಸಿ. ಪಾಟೀಲ್ ರಾಜ್ಯ ಕೃಷಿ ಸಚಿವ

ಜಾರಿಗೆ ಸಚಿವರ ಸರ್ವ ಪ್ರಯತ್ನ

ರೈತರ ಖಾತೆಗೆ ನಗದು ವರ್ಗಾವಣೆ ಕುರಿತು ಹಲವು ರೀತಿಯ ಪ್ರಯತ್ನಗಳು ಜಾರಿಯಲ್ಲಿದ್ದು ಅಂತಿಮ ನಿರ್ಧಾರ ಇನ್ನೂ ಆಗಿಲ್ಲ ಎಂದು ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದ ಗೌಡ ತಿಳಿಸಿದ್ದಾರೆ. ದೇಶಾದ್ಯಂತ 2.26 ಲಕ್ಷ ಪಿಒಎಸ್ ಯಂತ್ರಗಳನ್ನು ಮಾರಾಟ ಕೇಂದ್ರಗಳಲ್ಲಿ ಅಳವಡಿಸಿ ರಸಗೊಬ್ಬರ ಪೂರೈಸಲಾಗುತ್ತಿದೆ. ಸದ್ಯ ಮಾರಾಟದ ಆಧಾರದಲ್ಲಿ ವಾರಕ್ಕೊಮ್ಮೆ ಉತ್ಪಾದನಾ ಸಂಸ್ಥೆಗಳಿಗೆ ಸಬ್ಸಿಡಿ ಮೊತ್ತ ವರ್ಗಾಯಿಸಲಾಗುತ್ತಿದೆ. ರಸಗೊಬ್ಬರ, ಕೃಷಿ ಮತ್ತಿತರ ಇಲಾಖೆಗಳ ಕಾರ್ಯದರ್ಶಿಗಳ ನೋಡಲ್ ಸಮಿತಿ 2020ರ ಜೂನ್‌ನಿಂದ ಅಕ್ಟೋಬರ್‌ವರೆಗೆ ಹಲವು ಹಂತದ ಸಭೆ ನಡೆಸಿ ಚರ್ಚಿಸಿದರೂ ಸ್ಪಷ್ಟ ರೂಪುರೇಷೆ ಸಿದ್ಧಪಡಿಸುವಲ್ಲಿ ವಿಫಲವಾಯಿತು. ಬಳಿಕ ಸಚಿವ ಸದಾನಂದಗೌಡರ ನೇತೃತ್ವದಲ್ಲಿ 'ಚಿಂತನ್ ಶಿವಿರ್ ವರ್ಕಿಂಗ್ ಗ್ರೂಪ್' ರಚನೆ ಮಾಡಿ ಅಧಿಕಾರಿಗಳು, ರಸಗೊಬ್ಬರ ಉತ್ಪಾದಕರು, ವರ್ತಕ ಹಾಗೂ ಕೃಷಿಕ ಪ್ರತಿನಿಧಿಗಳೊಂದಿಗೆ ಹಲವು ಹಂತದ ಸಭೆ ನಡೆಸಲಾಗಿದೆ. ಇನ್ನೂ ಸ್ಪಷ್ಟತೆ ಕಂಡುಬಂದಿಲ್ಲ.

- ಸಬ್ಸಿಡಿ ದರವನ್ನೂ ಸೇರಿಸಿ ಉತ್ಪಾದಕರು ರಸಗೊಬ್ಬರವನ್ನು ಮಾರುವುದರಿಂದ, ರಸಗೊಬ್ಬರದ ಬೆಲೆ ಹೆಚ್ಚಾಗಲಿದೆ.
- ರೈತರ ಜಮೀನಿನ ದಾಖಲೆಗಳನ್ನು ಆಧಾರ್‌ನೊಂದಿಗೆ ಲಿಂಕ್ ಮಾಡಲಾಗುತ್ತದೆ. ಪಿಒಎಸ್ ಯಂತ್ರದಲ್ಲಿ ರೈತರ ಆಧಾರ್ ಸಂಖ್ಯೆ ದಾಖಲಿಸಿದಾಗ ಅವರು ಇಂತಿಷ್ಟು ಗೊಬ್ಬರ ಖರೀದಿಸಬಹುದೆಂದು ಯಂತ್ರವೇ ತೋರಿಸುತ್ತದೆ. ಆದರೆ ಲಕ್ಷಾಂತರ ರೈತರಿಗೆ ಜಮೀನಿನ ಸೂಕ್ತ ದಾಖಲೆಗಳಿಲ್ಲ. ಕುಟುಂಬದ ಹಲವು ಸದಸ್ಯರ ಹೆಸರುಗಳೂ ಪಹಣಿಯಲ್ಲಿರುವುದು ಸಾಮಾನ್ಯ. ಇದರಿಂದಾಗಿ ದಾಖಲೆ ಆಧರಿಸಿ ಇಂತಿಷ್ಟೇ ಗೊಬ್ಬರ ನೀಡುವ ಕ್ರಮ ತೊಂದರೆದಾಯಕ.
- ಈ ಮೊದಲು ಕೃಷಿಕ ಬಯಸಿದಷ್ಟು ರಸಗೊಬ್ಬರ ನೀಡಲಾಗುತ್ತಿತ್ತು. ಇದೀಗ ಬಯೋಮೆಟ್ರಿಕ್ ಆಧಾರದಲ್ಲಿ ವ್ಯಕ್ತಿಯೊಬ್ಬರು ಮಾಸಿಕ 50 ಚೀಲ ರಸಗೊಬ್ಬರವನ್ನಷ್ಟೇ ಖರೀದಿಸಲು ಅವಕಾಶ. ಇದು ಶಿವಮೊಗ್ಗ, ಕೊಡಗು, ಚಿಕ್ಕಮಗಳೂರು ಜಿಲ್ಲೆಗಳು ಅಥವಾ ಕೇರಳ, ತಮಿಳುನಾಡುಗಳ ತೋಟಗಾರಿಕಾ ಬೆಳೆಗಾರರಿಗೆ ಗಂಭೀರ ಸಮಸ್ಯೆ ಸೃಷ್ಟಿಸಿದೆ. ಮುಂಗಾರು ಅಥವಾ ಹಿಂಗಾರಿನಲ್ಲಿ ಏಕಕಾಲಕ್ಕೆ ನೂರಾರು ಚೀಲ ರಸಗೊಬ್ಬರ ಬೇಕಾಗುತ್ತದೆ. ವರ್ಷವಿಡೀ ರಸಗೊಬ್ಬರ ಖರೀದಿಸಿ ಸಂಗ್ರಹಿಸಿಟ್ಟುಕೊಳ್ಳುವುದು ಸಾಧ್ಯವಿಲ್ಲ. ಇನ್ನೊಂದೆಡೆ ಮಾಸಿಕ 50 ಚೀಲ ಖರೀದಿಗೆ ಅವಕಾಶವಿರುವುದರಿಂದ ಇದನ್ನೇ ದಂಧೆಯಾಗಿಸಿಕೊಳ್ಳುವವರು ತಮಗೆ ಅಗತ್ಯವಿರದಿದ್ದರೂ ಖರೀದಿಸಿ ಇರಿಸಿಕೊಂಡು ಮಾರಿಕೊಳ್ಳಬಹುದು.
- ದೇಶದಲ್ಲಿ 14 ಕೋಟಿ ರೈತ ಕುಟುಂಬಗಳಿವೆ ಎನ್ನುವುದು ಸರಕಾರದ ಮಾಹಿತಿ. ಪಿಎಂ ಕಿಸಾನ್ ಯೋಜನೆಯಡಿ 8 ಕೋಟಿ ರೈತ ಕುಟುಂಬಗಳನ್ನಷ್ಟೇ ಗುರುತಿಸಲಾಗಿದೆ. ಯಾವುದೇ ರೈತ ಸರಕಾರಿ ಸಬ್ಸಿಡಿಯಿಂದ ವಂಚಿತನಾಗಬಾರದೆಂದರೆ ಅಷ್ಟೂ ರೈತರ ಮಾಹಿತಿಯನ್ನೂ ಒಂದು ವೆಬ್ ಪೋರ್ಟಲ್‌ನಲ್ಲಿ ಸಂಗ್ರಹಿಸಬೇಕಾಗುತ್ತದೆ. ಇದು ಕಷ್ಟಾಧ್ಯ. ಹೀಗಾಗಿ ರೈತರು ಬಯೋಮೆಟ್ರಿಕ್ ದಾಖಲೆ ನೀಡಿ ರಸಗೊಬ್ಬರ ಖರೀದಿಸಿದ ತಕ್ಷಣ ಅವರ ಖಾತೆಗೆ ಸಬ್ಸಿಡಿ ವರ್ಗಾವಣೆಯಾಗುವಂತಹ ವಿಧಾನ ಕಂಡುಕೊಳ್ಳುವುದು ಉತ್ತಮ.



- ಹೆಚ್ಚಿನ ಹಣ ನೀಡಿ ರಸಗೊಬ್ಬರ ಖರೀದಿಸಿದ ಬಳಿಕ ಖಾತೆಗೆ ಸಬ್ಸಿಡಿ ಮೊತ್ತ ಬರುವುದು ವಿಳಂಬವಾದರೆ ಬಡ ಕೃಷಿಕರಿಗೆ ತೊಂದರೆ.
- ಆಧಾರ್ ಅಥವಾ ಇನ್ನಿತರ ದಾಖಲೆ ನೀಡಿ ಒಟಿಪಿ ಮೂಲಕವೂ ರಸಗೊಬ್ಬರ ಖರೀದಿಗೆ ಅವಕಾಶವಿದೆ. ಇದು ವಂಚನೆಗೆ ಸಹಕಾರಿಯಾಗಬಹುದು.
- ವ್ಯವಹಾರ ಜ್ಞಾನವಿಲ್ಲದ ಕೃಷಿಕರಿಗೆ ಗೊತ್ತಾಗದಂತೆ ಮಾರಾಟಗಾರರು ತಮಗೆ ಬೇಕಾದವರ ಖಾತೆಗೆ ಸಬ್ಸಿಡಿ ವರ್ಗಾವಣೆಯಾಗುವಂತೆ ಮಾಡಬಹುದು.
- ಪಿಒಎಸ್ ಯಂತ್ರದಲ್ಲಿ ದಾಖಲಿಸುವ ವೇಳೆ ಮಾರಾಟಗಾರರು ಲೋಪಸೆಗಿದರೆ ಆದರಿಂದಾಗುವ ಆಡಚಣೆಗೆ ಯಾರು ಹೊಣೆ?

ಇದೆ ಇನ್ನೊಂದು ಲೆಕ್ಕಾಚಾರ



ರಸಗೊಬ್ಬರ ಖರೀದಿ ಆಧಾರದಲ್ಲಿ ಸಬ್ಸಿಡಿ ಒದಗಿಸುವುದಕ್ಕಿಂತ ಖಾರೀಫ್ ಮತ್ತು ರಾಬಿ ಸೀಸನ್‌ನಲ್ಲಿ ಹೆಕ್ಟೇರ್‌ಗೆ ತಲಾ 2500ರಂತೆ ವಾರ್ಷಿಕ 5000 ರೂ.ಗಳನ್ನು ರೈತರ ಖಾತೆಗೆ ನೇರವಾಗಿ ವರ್ಗಾಯಿಸುವ ಪ್ರಸ್ತಾವನೆಯೂ ಸರಕಾರದ ಮುಂದಿದೆ. ಆದರೆ ಇದು ಕೃಷಿಭೂಮಿಗೆ ಸೂಕ್ತ ದಾಖಲೆಗಳನ್ನು ಹೊಂದಿರುವ ಸಣ್ಣ ರೈತರಿಗಷ್ಟೇ ಅನುಕೂಲ. ಜತೆಗೆ ಸರಕಾರ ಸಬ್ಸಿಡಿ ಪ್ರಮಾಣಕ್ಕೆ ಮಿತಿ ವಿಧಿಸುವ ಸಾಧ್ಯತೆಯೂ ಇರುವುದರಿಂದ ಹೆಚ್ಚಿನ ಕೃಷಿ ಭೂಮಿ ಹೊಂದಿರುವ ರೈತರಿಗೆ ಸಬ್ಸಿಡಿ ಲಾಭ ಪೂರ್ಣವಾಗಿ ದೊರೆಯುವುದಿಲ್ಲ.

"Let's do what we love and do a lot of it"

UASB
LIBRARY
Newspaper Clippings
Pg .2 Tuesday 06-03-2021 Jai Kisan



ಒಂದು ಜಿಲ್ಲೆ-ಒಂದು ಉತ್ಪನ್ನ ಯೋಜನೆಗೆ ನೀರಸ ಪ್ರತಿಕ್ರಿಯೆ

ಕೆಲವೆಡೆ ಒಂದಂಕಿ ದಾಟದ ಅರ್ಜಿ | ತಾಂತ್ರಿಕ ಅಂಶಗಳಿಂದ ಗೊಂದಲ

ಯಾರಿಗೂ ಬೇಡದ ಉತ್ಪನ್ನ

■ **ಕಣತಹಳ್ಳಿ ಎನ್. ಚಂದ್ರೇಗೌಡ** ಚಿಕ್ಕಬಳ್ಳಾಪುರ
chandregowdavani@gmail.com

ಸ್ವಾವಲಂಬನೆ ಉದ್ದೇಶದೊಂದಿಗೆ ಆರಂಭವಾಗಿ ಭಾರಿ ಸದ್ದು ಮಾಡಿದ್ದ 'ಒಂದು ಜಿಲ್ಲೆಒಂದು ಉತ್ಪನ್ನ' ಯೋಜನೆಗೆ ರಾಜ್ಯದಲ್ಲಿ ನಿರೀಕ್ಷಿತ ಸ್ಪಂದನೆ ಸಿಕ್ಕಿಲ್ಲ. ಒಂದೊಂದು ಜಿಲ್ಲೆಯಲ್ಲಿ ಬೆರಳೆಣಿಕೆ ಮಂದಿ ಮಾತ್ರ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಆಯಾ ಜಿಲ್ಲೆಯಲ್ಲಿ ಅತಿ ಹೆಚ್ಚು ಬೆಳೆಯುವ ತರಕಾರಿ ಮತ್ತು ಹಣ್ಣಿನಂಥ ಬೇಗ ಹಾಳಾಗುವ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಸಂಸ್ಕರಿತ ಘಟಕಗಳನ್ನು ಸ್ಥಾಪಿಸಬೇಕು, ಆಯಾ ಜಿಲ್ಲೆಯಲ್ಲೇ ಬೆಳೆಗೆ ಮಾರುಕಟ್ಟೆ ಒದಗಿಸಬೇಕೆಂಬ ಉದ್ದೇಶದೊಂದಿಗೆ ಶುರುವಾಗಿದ್ದು ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆ. ಈ ಯೋಜನೆಗೆ ರೈತರು ಭಾರಿ ಉತ್ಸಾಹ ತೋರುತ್ತಾರೆ ಎಂದು ಭಾವಿಸಲಾಗಿತ್ತು.

ಚಿಕ ಫೋಕಸ್

ಸಂಸ್ಕರಣಾ ಘಟಕ ಸ್ಥಾಪನೆಗೆ ದೊಡ್ಡ ಮಟ್ಟದ ಬಂಡವಾಳ ಹೂಡಿಕೆ ಅಗತ್ಯ, ಸಂಸ್ಕರಿತ ಉತ್ಪನ್ನಗಳ ಮಾರುಕಟ್ಟೆಯ ಬಗ್ಗೆ ಸ್ಪಷ್ಟತೆ ಇಲ್ಲದಿರುವುದು ಹಿನ್ನಡೆಯಾಗಿದೆ. ಹೀಗಾಗಿ, ಈಗಿರುವಂತೆ ಉತ್ಪನ್ನಗಳನ್ನು ಮಾರಾಟ ಮಾಡುವ ಪ್ರಕ್ರಿಯೆಯೇ ಸುಲಭ ಎಂಬ ಅಭಿಪ್ರಾಯಕ್ಕೆ ರೈತರು ಬಂದಿರುವಂತೆ ಕಾಣುತ್ತದೆ.

ಅರ್ಜಿ ಒಂದಂಕಿ ದಾಟಿಲ್ಲ: ಬಹುತೇಕ ಜಿಲ್ಲೆಗಳಲ್ಲಿ ರೈತರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಅರ್ಜಿಗಳ ಸಂಖ್ಯೆ ಒಂದಂಕಿಯನ್ನೂ ಮೀರಿಲ್ಲ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 4 ಅರ್ಜಿಗಳು ಬಂದಿದ್ದು 2 ಸ್ವಹಾಯ ಸಂಘಗಳು ಮತ್ತು ಇಬ್ಬರು ರೈತರು ಅರ್ಜಿ ಸಲ್ಲಿಸಿದ್ದಾರೆ. ಕೋಲಾರದಲ್ಲಿ 12 ಮಂದಿ ಅರ್ಜಿ ಸಲ್ಲಿಸಿದ್ದು, 4 ಅರ್ಜಿಗಳನ್ನು ಬ್ಯಾಂಕ್ ಸಾಲಕ್ಕಾಗಿ ಶಿಫಾರಸು ಮಾಡಲಾಗಿದೆ. ಇನ್ನು 8 ಅರ್ಜಿಗಳು ಪರಿಶೀಲನೆಯಲ್ಲಿವೆ. »02





ಜಿಲ್ಲೆ	ಉತ್ಪನ್ನ	ಅರ್ಜಿಗಳು
ಚಿಕ್ಕಬಳ್ಳಾಪುರ	ಟೊಮೇಟೊ	04
ಕೋಲಾರ	ಟೊಮೇಟೊ	12
ಬೆಂಗಳೂರು ಗ್ರಾ.	ಕೋಳಿ ಉತ್ಪನ್ನ	08
ತುಮಕೂರು	ತೆಂಗು ಉತ್ಪನ್ನ	08
ರಾಮನಗರ	ತೆಂಗು ಉತ್ಪನ್ನ	12

ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ರೈತರಿಗೆ ನೆರವು ನೀಡಲು ತೋಟಗಾರಿಕೆ ಇಲಾಖೆ ಸಿದ್ಧವಾಗಿದೆ. ಪ್ರತಿ ಹಂತದಲ್ಲೂ ಮಾರ್ಗದರ್ಶನ ನೀಡಲಾಗುವುದು. ಅರ್ಜಿ ಸಲ್ಲಿಸುವ ಹಂತದಿಂದ ಮಾರುಕಟ್ಟೆಯವರೆಗೂ ನೆರವು ನೀಡುತ್ತೇವೆ. ರೈತರು ಇದರ ಬಗ್ಗೆ ಇನ್ನಷ್ಟು ಜಾಗೃತರಾಗಬೇಕಿದೆ. ರೈತರು ಧೈರ್ಯದಿಂದ ಮುಂದೆ ಬಂದರೆ ಈ ಯೋಜನೆ ಯಶಸ್ವಿಯಾಗಲು ಸಾಧ್ಯ.

-ಕೆ.ಬಿ.ಕೃಷ್ಣಮೂರ್ತಿ
ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ

ರೈತರಿಗೆ ಆಸಕ್ತಿ ಏಕಿಲ್ಲ?

■ **ತಕ್ಷಣ ಲಾಭದ ನಿರೀಕ್ಷೆ:** ಈ ಯೋಜನೆಯಡಿ ಮೊದಲು ಬಂಡವಾಳ ಹೂಡಬೇಕು. ಆರಂಭದಲ್ಲಿ ಹೆಚ್ಚಿನ ಲಾಭ ನಿರೀಕ್ಷಿಸಲಾಗದು. ಆದರೆ, ಸದ್ಯ ಬಂಡವಾಳ ಹೂಡುವ ರೈತರು ದಿಢೀರ್ ಲಾಭದ ನಿರೀಕ್ಷೆಯಲ್ಲಿದ್ದಾರೆ. ಹೀಗಾಗಿ ಸಂಸ್ಕರಣ ಘಟಕಗಳ ಸ್ಥಾಪನೆಗೆ ಹೆಚ್ಚಿನ ರೈತರು ಮುಂದಾಗುತ್ತಿಲ್ಲ.

■ **ಮಾರುಕಟ್ಟೆ ಸಮಸ್ಯೆ ಇಲ್ಲ:** ವರ್ಷದ ಕೆಲವು ತಿಂಗಳಷ್ಟೇ ಉತ್ಪನ್ನಗಳಿಗೆ ಮಾರುಕಟ್ಟೆ ಸಮಸ್ಯೆ ಎದುರಾಗುವುದು ಬಿಟ್ಟರೆ ಉಳಿದ ಕಾಲದಲ್ಲಿ ಒಳ್ಳೆಯ ಡಿಮ್ಯಾಂಡ್ ಇದೆ. ಮಾರಾಟಕ್ಕೂ ಉತ್ತಮ ಅವಕಾಶಗಳಿವೆ.

■ **ಮಾಹಿತಿ ಕೊರತೆ:** ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆ ಸಂಬಂಧ ಸಾಕಷ್ಟು ಮಾಹಿತಿ ಕೊರತೆ ಇದೆ. ಆಹಾರ ಸಂಸ್ಕರಣೆ ವಿಭಾಗದ ಬಗ್ಗೆಯೇ ಸಾಕಷ್ಟು ಜನರಿಗೆ ಗೊಂದಲವಿದೆ. ಸಂಸ್ಕರಣೆ ವಿಷಯದಲ್ಲಿ ಹೆಚ್ಚು ತಾಂತ್ರಿಕ ವಿಷಯಗಳಿವೆ. ಇದು ಸಾಮಾನ್ಯ ರೈತರಿಗೆ ಅರ್ಥ ಮಾಡಿಸುವುದು ಕಷ್ಟವೇ. ಸ್ವಸಹಾಯ ಸಂಘಗಳಿಗೂ ಇದನ್ನು ಅರ್ಥ ಮಾಡಿಸಬೇಕಾದ ಅಗತ್ಯವಿದೆ.

■ **ಪ್ರಾಜೆಕ್ಟ್ ರಿಪೋರ್ಟ್ ಕಿರಿಕಿರಿ:** ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ಅರ್ಜಿ ಸಲ್ಲಿಸಿ ನಂತರ ನಡೆಯಬೇಕಾದ ಪ್ರಕ್ರಿಯೆಗಳು ಸಾಕಷ್ಟು ಜಟಿಲವಾಗಿವೆ. ಪ್ರಾಜೆಕ್ಟ್ ರಿಪೋರ್ಟ್ ಸೇರಿದಂತೆ ಸಾಕಷ್ಟು ತಾಂತ್ರಿಕ ಅಂಶಗಳನ್ನು ಕೇಳಲಾಗುತ್ತದೆ.

06-04-2021
Vk Pg 01

ಅನುಷ್ಠಾನದ ಉತ್ಸಾಹ ಇರಲಿ

ಒಂದು ಜಿಲ್ಲೆ ಒಂದು ಉತ್ಪನ್ನ ಯಶಸ್ವಿಯಾಗಲಿ

ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಯೋಜನೆ 'ಒಂದು ಜಿಲ್ಲೆ ಒಂದು ಉತ್ಪನ್ನ'ಕ್ಕೆ ರಾಜ್ಯದಲ್ಲಿ ಸಿಕ್ಕಿರುವ ಪ್ರತಿಕ್ರಿಯೆ ನೀರಸವಾಗಿದೆ. ಅದಕ್ಕೆ ಸರಕಾರದ ಸಿದ್ಧತೆಯೂ ಅಷ್ಟೇ ನೀರಸವಾಗಿದೆ ಎಂಬುದನ್ನು ಬೇರೆ ಹೇಳಬೇಕಿಲ್ಲ. ಪ್ರತಿಯೊಂದು ಜಿಲ್ಲೆಯೂ ತನ್ನಲ್ಲಿ ಪ್ರಮುಖವಾಗಿ ಬೆಳೆಯು ಒಂದು ಉತ್ಪನ್ನವನ್ನು ಪ್ರಮುಖವಾಗಿ ಆಂಗೀಕರಿಸಿ, ಅದನ್ನು ಬ್ರಾಂಡ್ ಆಗಿ ಅಭಿವೃದ್ಧಿಪಡಿಸುವುದು; ಅದರ ಸಂಗ್ರಹ- ಸಂಸ್ಕರಣೆ- ಮಾರಾಟದ ವಿಚಾರದಲ್ಲಿ ಸ್ವಾವಲಂಬನೆ ಸಾಧಿಸುವುದು ಈ ಯೋಜನೆಯ ಉದ್ದೇಶ. ಆಯಾ ಜಿಲ್ಲೆಯಲ್ಲಿ ಅತಿ ಹೆಚ್ಚು ಬೆಳೆಯುವ ತರಕಾರಿ ಮತ್ತು ಹಣ್ಣಿನಂಥ ಬೇಗ ಹಾಳಾಗುವ ಉತ್ಪನ್ನಗಳನ್ನು ಪ್ರೋತ್ಸಾಹಿಸಲು ಸಂಸ್ಕರಿತ ಘಟಕಗಳನ್ನು ಸ್ಥಾಪಿಸಬೇಕು, ಆಯಾ ಜಿಲ್ಲೆಯಲ್ಲೇ ಬೆಳೆಗೆ ಮಾರುಕಟ್ಟೆ ಒದಗಿಸಬೇಕೆಂಬ ಗುರಿ ಇದರದು. ಬಹುತೇಕ ಜಿಲ್ಲೆಗಳಲ್ಲಿ ಇದಕ್ಕೆ ರೈತರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಕೆಲವು ಜಿಲ್ಲೆಗಳಲ್ಲಿ ಅರ್ಜಿಗಳ ಸಂಖ್ಯೆ ಒಂದಂಕಿಯನ್ನೂ ಮೀರಿಲ್ಲ.



ಈ ಯೋಜನೆಯ ಬಗ್ಗೆ ಒಂದು ಸಮಗ್ರ, ಸ್ಪಷ್ಟ ಚಿತ್ರಣ ಯಾರಲ್ಲೂ ಇಲ್ಲ. ಕೇಂದ್ರ ಸರಕಾರಕ್ಕೆ ಹಾಗೂ ರಾಜ್ಯ ಸರಕಾರಗಳಿಗೆ ಕೂಡ, ಹೊಸ ಯೋಜನೆಗಳನ್ನು ಘೋಷಿಸುವಲ್ಲಿ ಇರುವ ಉತ್ಸಾಹ ನಂತರ ಅದರ ಅನುಷ್ಠಾನದಲ್ಲಿ ಕಾಣಿಸುತ್ತಿಲ್ಲ. ಹೀಗಾಗಿ ಸಚಿವರು ಕೂಡ ಘೋಷಣೆಶೂರರಂತೆ ಕಾಣಿಸುತ್ತಿದ್ದಾರೆಯೇ ಹೊರತು, ಹೊಸ ಯೋಜನೆಗಳನ್ನು ತುದಿ ಮುಟ್ಟಿಸಿಲ್ಲ. ಇನ್ನು ಮುಂದೆ ಹೊಸ ಯೋಜನೆಗಳನ್ನು ಘೋಷಿಸುವ ಮುನ್ನ ಅದರ ಅನುಷ್ಠಾನದ ಸಾಧ್ಯತೆಯ ಬಗ್ಗೆ ಸಮಗ್ರವಾಗಿ ಆಲೋಚಿಸಿಕೊಂಡಿರುವುದು ಒಳಿತು.

ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಲ್ಲಿ ಸಂಸ್ಕರಣಾ ಘಟಕ ಸ್ಥಾಪನೆಗೆ ದೊಡ್ಡ ಮಟ್ಟದ ಬಂಡವಾಳ ಹೂಡಿಕೆ ಅಗತ್ಯ. ಸಂಸ್ಕರಿತ ಉತ್ಪನ್ನಗಳ ಮಾರುಕಟ್ಟೆಯ ಬಗ್ಗೆ ಸ್ಪಷ್ಟತೆ ಇಲ್ಲ. ಹೀಗಾಗಿ, ಈಗಿರುವಂತೆ ಉತ್ಪನ್ನಗಳನ್ನು ಮಾರಾಟ ಮಾಡುವ ಪ್ರಕ್ರಿಯೆಯೇ ಸುಲಭ ಎಂಬ ಅಭಿಪ್ರಾಯ ರೈತರದಾಗಿದೆ. ಈ ಯೋಜನೆಯಡಿ ಬಂಡವಾಳ ಹೂಡಿ ಲಾಭಕ್ಕೆ ದೀರ್ಘ ಕಾಲ ಕಾಯಬೇಕಿದ್ದು, ಅದಕ್ಕೆ ರೈತರು ಸಿದ್ಧರಿಲ್ಲ. ಆಹಾರ ಸಂಸ್ಕರಣೆ ವಿಚಾರದಲ್ಲಿ ಅನೇಕ ತಾಂತ್ರಿಕ ಮಾರ್ಗದರ್ಶನ ರೈತರಿಗೆ ಅಗತ್ಯವಿದೆ. ಅದನ್ನು ಯಾರು ಒದಗಿಸಲಿದ್ದಾರೆ ಗೊತ್ತಿಲ್ಲ. ಇದರಲ್ಲಿ ಸ್ವಸಹಾಯ ಸಂಘಗಳ ಪಾತ್ರ ಏನು, ಎಷ್ಟು ಎಂಬುದೂ ತಿಳಿಯದು. ಹೊಸ ಯೋಜನೆಯಡಿ ಅರ್ಜಿ ಸಲ್ಲಿಸಿದ ನಂತರ ನಡೆಯುವ ಸರಕಾರಿ ಪ್ರಕ್ರಿಯೆಗಳೂ ಜಟಿಲವಾಗಿರುವುದರಿಂದ ರೈತರು ಅದರ ತಂಟೆಗೇ ಹೋಗುತ್ತಿಲ್ಲ. ದೊಡ್ಡ ಮೊತ್ತದ ಹಣವನ್ನು ರೈತರು ಹೂಡಬೇಕಾಗಿದೆ. ಸಂಸ್ಕರಣ ಘಟಕದಿಂದ ಬಂದ ಉತ್ಪನ್ನವನ್ನು ಮಾರಾಟ ಮಾಡುವ ಪ್ರಶ್ನೆ ಎಂದಿನಂತೆ ರೈತರ ತಲೆಯ ಮೇಲೆಯೇ ಇದೆ. ಸರಕಾರದ ಭರವಸೆ ಇದ್ದರೂ ಅದನ್ನು ನಂಬುವ ಸ್ಥಿತಿಯಲ್ಲಿ ರೈತರು ಇಲ್ಲ. ಈಗಾಗಲೇ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿ ಸರಕಾರ ನೀಡುತ್ತಿರುವ ಭರವಸೆಗಳನ್ನು ಒಂದು ಬಗೆಯ ಅನುಮಾನದಿಂದಲೇ ರೈತರು ನೋಡುತ್ತಿದ್ದಾರೆ.

ವಾಸ್ತವವಾಗಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯ ವಿಚಾರದಲ್ಲಿ ನಮ್ಮ ರೈತರು ಯಾವತ್ತೂ ಸಾಹಸ ಮಾಡಲು ಹಿಂದೇಟು ಹಾಕುವವರೇ ಆಗಿದ್ದಾರೆ. ಹೊಲದಲ್ಲಿ ಪ್ರಯೋಗವನ್ನೂ ಮಾಡಲು ಹಿಂಜರಿಯುವ ನಮ್ಮ ರೈತರು ಸಾಂಪ್ರದಾಯಿಕ ಒಕ್ಕಲುತನದಲ್ಲಿ ಸಾರ್ಥಕತೆ ಕಾಣುವವರು. ಇವರನ್ನು ಹೊಸ ಸಾಹಸಗಳಲ್ಲಿ ತೊಡಗಿಸಲು ಅಪಾರ ಕರ್ತೃತ್ವ ಶಕ್ತಿ, ಸ್ಫೂರ್ತಿ ನೀಡುವ ಮುಂದಾಳುತನ, ಲೋಪದೋಷಗಳಿಲ್ಲದ ಕ್ರಿಯಾ ಯೋಜನೆ ರೂಪಿಸುವಿಕೆಗಳೆಲ್ಲ ಅಗತ್ಯವಾಗಿವೆ. ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಈ ನಿಟ್ಟಿನಲ್ಲಿ ನಾಯಕತ್ವ ವಹಿಸಬೇಕು. ಜಿಲ್ಲೆಗೊಂದು ಬ್ರಾಂಡ್ ರೂಪಿಸುವ ಈ ಯೋಜನೆಯ ಒಳನೋಟ ಚೆನ್ನಾಗಿಯೇ ಇದೆ; ಆದರೆ ಅದರ ಅನುಷ್ಠಾನದಲ್ಲಿ ಒಂದು ಬಗೆಯ ಉತ್ಸಾಹದಾಯಕ, ನಂಬುಗೆಯ ವಾತಾವರಣ ಇಲ್ಲದೆ ಹೋದರೆ, ನಷ್ಟವನ್ನೇ ಕಾಣುತ್ತಿರುವ ರೈತರು ಇನ್ನೊಂದು ನಷ್ಟದ ಬಾಬತ್ತಿಗೆ ಕೈಹಾಕುವ ಧೈರ್ಯವಿಲ್ಲದೆ ಸುಮ್ಮನಾಗುತ್ತಾರೆ.

UASB LIBRARY
Newspaper Clippings
Pg .3 Tuesday 06-04-2021 Jai Kisan



ತಾಟಿನಿಂಗು ದುಬಾರಿ

ಕೊರೊನಾ ಹಿನ್ನೆಲೆಯಲ್ಲಿ ಈ ಬಾರಿ ಹೆಚ್ಚಿನ ಕಡೆ ಮಾರಾಟವಿಲ್ಲ

■ **ವಿಕ ಸುದ್ದಿಲೋಕ** ಬೆಂಗಳೂರು

ಬೇಸಿಗೆ ಹಣ್ಣು ತಾಟಿನಿಂಗು ಮಾರುಕಟ್ಟೆಗೆ ಬಂದಿದೆ. ಆದರೆ ಈ ಬಾರಿ ಕೋವಿಡ್ ನಿಂದ ಹೆಚ್ಚಿನ ಕಡೆ ಮಾರಾಟ ನಡೆಯುತ್ತಿಲ್ಲ. ಬೆಲೆ ಕೂಡ ಹೆಚ್ಚಿದೆ.

ಕಳೆದ ವರ್ಷ ಇದೇ ಹಣ್ಣು ಚಿಲ್ಲರೆ ಮಾರುಕಟ್ಟೆಯಲ್ಲಿ 30 ರೂ.ಗೆ ಸಿಗುತ್ತಿತ್ತು. ಆದರೆ, ಈ ಬಾರಿ 35-40 ರೂ. (ಪ್ರತಿ ಕಾಯಿಯಲ್ಲಿ ಮೂರು ತೊಳೆ) ಆಗಿದೆ. ಬಿಡಿ ತೊಳೆಯಾದರೆ 15 ರೂ. ಗೆ ಒಂದನ್ನು ನೀಡಲಾಗುತ್ತದೆ.

ತಮಿಳುನಾಡು ಮತ್ತಿತರ ಭಾಗಗಳಲ್ಲಿ ತಾಟಿನಿಂಗು ಹೆಚ್ಚಾಗಿ ಬೆಳೆಯಲಾಗುತ್ತದೆ. ಬೆಂಗಳೂರಿಗೆ ಅಲ್ಲಿಂದಲೇ ರವಾನೆಯಾಗುತ್ತದೆ. ಏಪ್ರಿಲ್ ಆರಂಭದಲ್ಲೇ ಕೊಯ್ಲಿಗೆ ಬಂದರೆ ಜೂನ್‌ವರೆಗೆ ಲಭ್ಯವಿರುತ್ತದೆ.

ಕಳೆದ ವರ್ಷವೂ ಈ ಅವಧಿಯಲ್ಲಿ ಕೊರೊನಾ ಮಹಾಮಾರಿಯಿಂದಾಗಿ ಬೆಳೆಗಾರರು ತಾಟಿನಿಂಗು ಕೊಯ್ಲು ಮಾಡದೆ, ನೀರಾ ಇಳಿಸಿದ್ದರು. ನೀರಾ, ತಾಟಿ ಬೆಲ್ಲದ ರೂಪದಲ್ಲಿ ಮಾರಿದ್ದರು. ಈ ವರ್ಷವೂ ಕೊರೊನಾ ಹೆಚ್ಚಾಗುತ್ತಿದೆ. ಹೀಗಾಗಿ, ತಮಿಳುನಾಡಿನಿಂದ ಬರುವ ಪ್ರಮಾಣ ಕಡಿಮೆಯಾಗಿದೆ.

''ದೇಶದಲ್ಲಿ ಸುಮಾರು 8.6 ಕೋಟಿ ತಾಟಿನಿಂಗು ಮರಗಳಿವೆ. ಈ ಪೈಕಿ 5.02 ಕೋಟಿ ಮರ ತಮಿಳುನಾಡಿನಲ್ಲೇ ಇವೆ. ಉಳಿದಂತೆ ಇತರ ಉಷ್ಣವಲಯ ರಾಜ್ಯಗಳಾದ ಆಂಧ್ರಪ್ರದೇಶ, ಕೇರಳಗಳಲ್ಲಿ ಸಹ ಇದನ್ನು ಬೆಳೆಯುತ್ತಾರೆ. ಈ ವರ್ಷ ಅಧಿಕ ತಾಪಮಾನವಿದ್ದು, ಉತ್ತಮ ಇಳುವರಿ ಬಂದಿದೆ,''ಎನ್ನುತ್ತಾರೆ ತೋಟಗಾರಿಕೆ ಇಲಾಖೆ ನಿವೃತ್ತ ಹೆಚ್ಚುವರಿ ನಿರ್ದೇಶಕ ಡಾ. ಎಸ್.ವಿ. ಹಿತ್ತಲಮನಿ.



ಹೇರಳ ಖನಿಜಾಂಶ

ಎಳನೀರಿನಂತೆ ಕಾಣುವ ಈ ಹಣ್ಣನ್ನು ಕತ್ತರಿಸಿದಾಗ ಒಳಗಡೆ ಕೊಬ್ಬರಿಯಂತಹ ಮೂರು ಸ್ವಾದಿಷ್ಟ ತೊಳೆಗಳಿರುತ್ತವೆ. ಆ ತೊಳೆಗಳ ಒಳಗೆ ಸಿಹಿಯಾದ ಸ್ವಲ್ಪ ನೀರಿರುತ್ತದೆ. ಹೀಗಾಗಿ ತಿನ್ನುವಾಗ ಎಳ ನೀರಿನ ತಿಳಿ ಗಂಜಿ ತಿಂದ ಅನುಭವ ಸಿಗುತ್ತದೆ. ಹೀಗಾಗಿ ಬೇಸಿಗೆಯಲ್ಲಿ ಹೆಚ್ಚು ಜನ ಇದನ್ನು ಇಷ್ಟಪಡುತ್ತಾರೆ. ತೊಳೆಗಳು ಸಾಕಷ್ಟು ಪ್ರಮಾಣದ ಶರ್ಕರ, ರಂಜಕ, ಕಬ್ಬಿಣ, ವಿಟಮಿನ್ ಸಿ ಅಂಶ ಒಳಗೊಂಡಿದೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

06-04-2021
Vk Pg 12

ಕಾಳು ಮೆಣಸಿಗೆ ಮತ್ತೆ ಬಂತು ಶುಕ್ರದೆಸೆ

■ **ವಿಕ ಸುದ್ದಿಲೋಕ** ಮೈಸೂರು

ಹೊರ ರಾಷ್ಟ್ರಗಳಿಂದ ಕಳ್ಳಮಾರ್ಗದಲ್ಲಿ ಬರುತ್ತಿದ್ದ ಕರಿಮೆಣಸನ್ನು ಕೇಂದ್ರ ಸರಕಾರ ಬಿಗಿಯಾಗಿ ನಿಯಂತ್ರಿಸಿದ ಪರಿಣಾಮ ಸಾಕಷ್ಟು ವರ್ಷಗಳಿಂದ ಬೆಲೆ ಕುಸಿತದಿಂದ ಕಂಗಾಲಾಗಿದ್ದ ಬೆಳೆಗಾರರಿಗೆ ಇದೀಗ ಆಶಾದಾಯಕ ವಾತಾವರಣ ಕಂಡು ಬರುತ್ತಿದೆ. ಮೊದಲ ಬಾರಿಗೆ ಕೆ.ಜಿ.ಗೆ 400 ರೂ. ಗಡಿ ದಾಟಿದೆ.

ಒಂದು ಕಾಲದಲ್ಲಿ ಅತ್ಯುತ್ತಮ ಬೆಲೆಯಿಂದ 'ಕರಿಚಿನ್ನ' ಎಂದು ಕರೆಯಿಸಿಕೊಂಡಿದ್ದ ಕರಿಮೆಣಸಿನ ಬೆಲೆ ಸಾಕಷ್ಟು ವರ್ಷಗಳಿಂದ ಪಾತಾಳಮುಖಿಯಾಗಿತ್ತು. ಅದರ ನಿರ್ವಹಣೆ ವೆಚ್ಚವೂ ಬಾರದ ಹಿನ್ನೆಲೆಯಲ್ಲಿ ಈ ಬೆಳೆಯತ್ತ ಬೆಳೆಗಾರರು ನಿರ್ಲಕ್ಷ್ಯ ತೋರಲಾರಂಭಿಸಿದರು. ಕೆಜಿಗೆ 200 ರೂ.ಗಳ ಆಸು ಪಾಸಿನಲ್ಲಿದ್ದ ಬೆಲೆ ಇದೀಗ ಕೊಯ್ಲು ಸಮಯದಲ್ಲಿಯೇ ದುಪ್ಪಟ್ಟಾಗಿದ್ದು, ಇನ್ನಷ್ಟುದರ ಏರಿಕೆಯಾಗುವುದು ಲಕ್ಷಣ ತೋರಿದೆ. ಉತ್ತಮ ಗುಣಮಟ್ಟದಿಂದಾಗಿ ಭಾರತ ಕರಿಮೆಣಸಿಗೆ ಜಾಗತಿಕ ಮಾರುಕಟ್ಟೆಯಲ್ಲಿ ಟನ್‌ಗೆ 5,275 ಡಾಲರ್ ಬೆಲೆ ಇದೆ.



06-04-2021
Vk Pg 12